# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1189
ಸದಸ್ಯರ ಹೆಸರು : ಶ್ರೀ. ಕೆ.ಪ್ರತಾಪಚಂದ್ರ ಶೆಟ್ಟಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 23.12.2021
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ವಾರಾಹಿ ನೀರಾವರಿ ಮೂಲ ಯೋಜನೆಯ ದಡದಲ್ಲಿರುವ ಗ್ರಾಮಗಳು ಬೇರೆ ಬೇರೆ ಯೋಜನೆಯ ಮೂಲಕ ನೀರನ್ನು ಮೇಲೆತ್ತಲು ಮನವಿಯನ್ನು ಸಲ್ಲಿಸಿದಾಗ ನೀರಿನ ಅಲಭ್ಯತೆಯ ಕುರಿತು ಹಿಂಬರಹ ನೀಡಿದ ಕರ್ನಾಟಕ ನೀರಾವರಿ ನಿಗಮವು ಗುತ್ತಿಗೆದಾರರ ಹಿತಾಸಕ್ತಿಯ ಯೋಜನೆಗಳಿಗೆ ನೀರಿನ ಲಭ್ಯತೆಯನ್ನು ದೃಢೀಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಾರಾಹಿ ನೀರಾವರಿ ಯೋಜನೆಯಡಿಯಲ್ಲಿ ಆಯಾ ಕಾಮಗಾರಿಗಳ ಸ್ಥಳದಲ್ಲಿ ನೀರಿನ ಲಭ್ಯತೆಯನ್ನು ಆಧರಿಸಿ, ತಾಂತ್ರಿಕವಾಗಿ ಪರಿಶೀಲಿಸಿ, ಅವಶ್ಯಕತೆಗೆ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ ವಾರಾಹಿ ನದಿಯಿಂದ ವಾರಾಹಿ ನೀರಾವರಿ ಯೋಜನೆ ಹಾಗೂ ಸೌಕೂರು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.<br>ಈ ಯೋಜನೆಗಳನ್ನು ನೀರಾವರಿ ಸಾಮರ್ಥ್ಯ ಕಲ್ಪಿಸುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಗುತ್ತಿಗೆದಾರರ ಹಿತಾಸಕ್ತಿಯ ಯೋಜನೆಗಳಾಗಿರುವುದಿಲ್ಲ. |
| ಆ | ಸೌಕೂರು ಏತ ನೀರಾವರಿ ಯೋಜನೆಯಲ್ಲಿ ಟರ್ನ್-ಕೀ ಆಧಾರಿತ 71.74 ಕೋಟಿ ವೆಚ್ಚದಲ್ಲಿ 1350 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಒದಗಿಸುವ ಕಾಮಗಾರಿಯು ಪೂರ್ಣವಾದರೂ ಹೆಚ್ಚುವರಿಯಾಗಿ ರೈಸಿಂಗ್ ಮೈನ್‌ನ್ನು ಯಾವ ಪ್ರದೇಶಗಳಿಗೆ ಕೊಂಡೊಯ್ಯಲಾಗುತ್ತಿದೆ; ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆಯೇ; ಹೌದಾದಲ್ಲಿ ಅಂದಾಜುಪಟ್ಟಿ ಮಂಜೂರಾತಿ ಅನುಮೋದನೆಯಾದ ಪ್ರತಿ ಟೆಂಡರ್ ಪ್ರತಿಯನ್ನು ಒದಗಿಸುವುದು; ಇಲ್ಲವಾದಲ್ಲಿ ಅನಧಿಕೃತವಾಗಿ ಇಡೀ ಜಿಲ್ಲೆಯ ಜನರನ್ನು ಕತ್ತಲಿನಲ್ಲಿಟ್ಟು ಗುತ್ತಿಗೆದಾರರು ತಮ್ಮ ಹಿತಾಸಕ್ತಿಯಂತೆ ಕಾಮಗಾರಿಯನ್ನು ನಡೆಸುತ್ತಿರುವುದನ್ನು ಕಂಡೂ ಕೂಡಾ ಸಂಬಂಧಿತ ಇಲಾಖೆಗಳು ಮತ್ತು ಜಿಲ್ಲಾಡಳಿತ ಜಾಣ ಕುರುಡು ಮತ್ತು ಮೌನವಾಗಿರಲು ಕಾರಣವೇನು? | ಸೌಕೂರು ಏತ ನೀರಾವರಿ ಯೋಜನೆಯ ಅನುಮೋದಿತ ಕಾಮಗಾರಿ ಸ್ವರೂಪ ಮತ್ತು ವ್ಯಾಪ್ತಿಯಡಿಯಲ್ಲಿ ಪ್ರಸ್ತುತ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಅದರಂತೆ ಮೂಲ ಯೋಜನಾ ವರದಿಯಂತೆ ಉದ್ದೇಶಿತ 1350 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಅಗತ್ಯ ಇರುವ ರೈಸಿಂಗ್ ಮೇನ್ ಹಾಗೂ ಇತರೆ ಕಾಂಪೊನೆಂಟ್‌ಗಳ ವಿನ್ಯಾಸ ಹಾಗೂ ನಕ್ಷೆಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ಕಾಗಿ ಯಾವುದೇ ಪ್ರತ್ಯೇಕ ಟೆಂಡರ್ ಆಹ್ವಾನಿಸಲಾಗಿರುವುದಿಲ್ಲ. |

ಸಂಖ್ಯೆ: ಜಸಂಇ 263 ಎಂಎಲ್ಎ 2021

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು